**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಶಿಡ್ಲಘಟ್ಟ**

**ಅಸಲು ದಾವಾ ಸಂಖ್ಯೆ: 290 /2014**

**ಪಿ.ಡಬ್ಲ್ಯು.1**

ದಿನಾಂಕ: 11-11-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀಸವಾಲು: 2ನೇಪ್ರತಿವಾದಿ ಪರ ವಕೀಲರಾದ ಶ್ರೀ.ಎಸ್.ಕೆ.ಎನ್ ರವರಿಂದ

ಈ ಕೇಸನ್ನು ನನಗೆ ಭಾಗ ಬರಬೇಕೆಂದು ಹಾಕಿರುತ್ತೇನೆ. 11 ಸ್ವತ್ತುಗಳಲ್ಲಿ ಭಾಗ ಬರಬೇಕೆಂದು ಹಾಕಿರುತ್ತೇನೆ. ದಾವಾ ಸ್ವತ್ತಿನಲ್ಲಿ ಅರ್ಧ ಭಾಗ ಬರಬೇಕು.

ತಿರುಮಲಪ್ಪರವರಿಗೆ ದುಗ್ಗಪ್ಪ, ದುಗ್ಗಮ್ಮ ಮತ್ತು ವೆಂಕಟರಾಯಪ್ಪ ಎಂಬ ಮೂರು ಜನ ಮಕ್ಕಳಿದ್ದಾರೆಂದರೆ ಸರಿ. ದುಗ್ಗಪ್ಪ ಮತ್ತು ಅವರ ಹೆಂಡತಿ ಮುನಿಯಮ್ಮ ಮೃತಪಟ್ಟಿದು ಅವರಿಗೆ ಮಕ್ಕಳಿಲ್ಲ ಎಂದರೆ ಸರಿ. ದುಗ್ಗಮ್ಮರವರಿಗೆ ನಾನು ಮತ್ತು 1ನೇ ಪ್ರತಿವಾದಿ ಇಬ್ಬರು ಮಕ್ಕಳು ಎಂದರೆ ಸರಿ. ವೆಂಕಟರಾಯಪ್ಪರವರಿಗೆ ಮೊದಲನೆ ಹೆಂಡತಿ ಕೋಡೆಮ್ಮ ಮತ್ತು 2ನೇ ಹೆಂಡತಿ ಗುರೆಮ್ಮ ಎಂದರೆ ಸರಿ. ಕೋಡೆಮ್ಮರವರು ಬದುಕಿದ್ದು ಮಕ್ಕಳಿಲ್ಲ ಎಂದರೆ ಸರಿ. ಗುರೆಮ್ಮರವರಿಗೆ ಪೂಜಮ್ಮ, ನಾರಾಯಣಮ್ಮ ಮತ್ತು 2ನೇ ಪ್ರತಿವಾದಿ ಮೂರು ಜನ ಮಕ್ಕಳು ಎಂದರೆ ಸರಿ.

ಪ್ರತಿವಾದಿಗಳು ದಾವಾ ಸ್ವತ್ತುಗಳಲ್ಲಿ ಉಳುಮೆ ಮಾಡುತ್ತಿದ್ದಾರೆ. ನಾನು ಕೂಡ ಉಳುಮೆ ಮಾಡುತ್ತಿಲ್ಲ ಉಳುಮೆ ಮಾಡಲು ಹೋದರೆ ಪ್ರತಿವಾದಿಗಳು ಗಲಾಟೆ ಮಾಡುತ್ತಾರೆ. ನಿಪಿ.1ನ್ನು ಸಬ್‌ರಿಜಿಸ್ಟರ್ ಆಫೀಸಿನಲ್ಲಿ ಟೈಪ್ ಮಾಡಿಸಲಾಗಿರುತ್ತದೆ ದುಗ್ಗಪ್ಪರವರು ಮಾಡಿಸಿರುತ್ತಾರೆ. ಅಕ್ಕಲರೆಡ್ಡಿರವರು ಸುಮಾರು 10 ವರ್ಷಗಳಿಂದ ಪರಿಚಯ ಇರುತ್ತದೆ. ನಿಪಿ.1ನ್ನು ಟೈಪ್ ಮಾಡಿಸುವಾಗ ಯಾರು ಯಾರು ಇದ್ದರೆಂದು ನನಗೆ ಗೊತ್ತಿಲ್ಲ.

ನಿಪಿ.1ರಲ್ಲಿ ಏನು ಟೈಪ್ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ.1ಕ್ಕೆ ಅಕ್ಕುಲರೆಡ್ಡಿ, ಕ ದಿರೆಪ್ಪ ಮತ್ತು ಕರುವಹಳ್ಳಿ ನಾರಾಯಣಪ್ಪ ಸಹಿ ಮಾಡಿದ್ದಾರೆ.

ನಿಪಿ.2ನ್ನು ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ದುಗ್ಗೆಪ್ಪರವರು ಮಾಡಿಸಿರುತ್ತಾರೆ. ನಿಪಿ.2ರಲ್ಲಿ ಬರೆದಿರುವ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ.1 ನ್ನು ನಮ್ಮ ಮನೆಯಲ್ಲಿ ದುಗ್ಗೆಪ್ಪರವರು 1995ರಿಂದ ಇಟ್ಟುಕೊಂಡಿದ್ದರು. ನಿಪಿ.2ನ್ನು ನಮ್ಮ ಮನೆಯಲ್ಲಿ ದುಗ್ಗೆಪ್ಪರವರು 2008ರಿಂದ ರಿಂದ ಇಟ್ಟುಕೊಂಡಿದ್ದರು. ದುಗ್ಗೆಪ್ಪರವರಿಗೆ ಸಾಯುವ ಕಾಲಕ್ಕೆ 95 ವರ್ಷ ಆಗಿತ್ತು. ದುಗ್ಗೆಪ್ಪರವರಿಗೆ ಹುಷಾರಿಲ್ಲದಾಗ ನಾನೇ ಚಿಕಿತ್ಸೆ ಕೊಡಿಸುತ್ತಿದ್ದೆ. ದುಗ್ಗೆಪ್ಪರವರನ್ನು ವೃದ್ಧಾಪ್ಯ ವೇತನಕ್ಕೆ, ಗುರುತಿನ ಚೀಟಿಯನ್ನು ಮಾಡಿಸಲು ನಾನೇ ಕರೆದುಕೊಂಡು ಹೋಗುತ್ತಿದ್ದೆ. ದುಗ್ಗೆಪ್ಪರವರು ಓದಿಲ್ಲ, ಓದಲು ಬರೆಯಲು ಬರುವುದಿಲ್ಲ ಮತ್ತು ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದರು ಎಂದರೆ ಸರಿ. ದುಗ್ಗೆಪ್ಪರವರಿಗೆ ವಯಸ್ಸಾದ ಕಾರಣ ಕಿವಿ ಸರಿಯಾಗಿ ಕೇಳಿಸುತ್ತಿರಲಿಲ್ಲ ಮತ್ತು ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿ ಅಲ್ಲ. ದುಗ್ಗೆಪ್ಪರವರನ್ನು ನಾನು ಕರೆದಾಗ ಬರುತ್ತಿದ್ದರು ಎಂದರೆ ಸರಿ ಅಲ್ಲ.

ನಿಪಿ.4 ರಿಂದ 16 ಮತ್ತು 18ರಲ್ಲಿ ದುಗ್ಗೆಪ್ಪರವರ ಹೆಸರಿನಲ್ಲಿದೆ ಎಂದರೆ ಸರಿ. ನಿಪಿ.4 ರಿಂದ 16 ರಲ್ಲಿ ಹೇಳಿದ ಆಸ್ತಿಗಳಲ್ಲಿ ನಾನು ಮತ್ತು ಪ್ರತಿವಾದಿಗಳು ಉಳುಮೆ ಮಾಡುತ್ತಿಲ್ಲ ಎಂದರೆ ಸರಿ.

2ನೇ ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆ ದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖ ನದಂತೆ ಸಾಕ್ಷಿಯ ಹೇಳಿ ಕೆಯನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ಶ್ರೀಮತಿ. ರೋಹಿಣಿ. ಡಿ)

ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ
ಶಿಡ್ಲಘಟ್ಟ.